ವಿಧಾನ ಸೌಧದ ಮುಂದೆ ಚಳುವಳಿಯನ್ನು ೩೧-೧೦-೮೬ ರಂದು ನಡೆಸಲಿದ್ದಾರೆ. ಇದು ಸಾರ್ವಜನಿಕ ಮಹತ್ವದ ಸಮಸ್ಯೆಯಾದದ್ದರಿಂದ ಈ ಸದನದ ಗಮನ ಸೆಳೆಯಲು ಅನುಮತಿ ಕೋರಿದ್ದೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ನಾನು ವಿದ್ಯಾಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಉತ್ತರವನ್ನು ಒದಗಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

೧೩. ವೀರಾಜಪೇಟೆ ತಾಲ್ಲೂಕು ಪೆರಂಬಾಡಿ ಗ್ರಾಮದಲ್ಲಿ ದಲಿತರಿಗೆ ಸಂಬಂಧಪಟ್ಟ ಸ್ಮಶಾನವನ್ನು ಅತಿಕ್ರಮಣಕಾರರಿಂದ ತೆರವು ಮಾಡಿಸುವ ವಿಚಾರ

ಶ್ರೀಮತಿ ಸುಮಾ ವಸಂತ್.—ಮಾನ್ಯ ಸಭಾಧ್ಯಕ್ಷರೇ, ವಿರಾಜಪೇಟೆಯ ಪೆರಂಬಾಡಿ ಗ್ರಾಮದ ಸರ್ವೆ ನಂಬರ್ ೨೪೧-೧೮ ಪೈಸಾರಿ ಜಮೀನಿನ ೧.೬೦ ಎಕರೆಯನ್ನು ಸದರಿ ಗ್ರಾಮದ ದಲಿತರು ಶತ ಮಾನಗಳಿಂದಲೂ ಸ್ಮಶಾನವಾಗಿ ಉಪಯೋಗಿಸುತ್ತಿದ್ದು ಅದನ್ನು ಇತ್ತೀಚೆಗೆ ಸ್ಥಳೀಯರೊಬ್ಬರು ಆಕ್ರಮಿಸಿಕೊಂಡಿರುವುದನ್ನು ತೆರವುಗೊಳಿಸಲು ಒತ್ತಾಯಿಸಲಾಗಿದ್ದಾಗ್ಯೂ, ವೀರಾಜಪೇಟೆ ತಹಶೀಲ್ದಾರ್ ಅವರು ಆಕ್ರಮಣಕಾರರ ಪರ ವಹಿಸಿ ಬೇಡಿಕೆಯನ್ನು ನಿರಾಕರಿಸಿರುವುದರಿಂದ ಅವರ ವಿರುದ್ಧ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರತಿಭಟನಾ ಮೆರವಣಿಗೆ ನಡೆಸಿದ್ದು, ತಾಲ್ಲೂಕಿನ ಬಡಹರಿಜನರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸುವಂತೆ ಕೋರಿ ಸರ್ಕಾರದವರನ್ನು ಒತ್ತಾಯಿಸಿದ್ದಾಗ್ಯೂ ಈ ಬಗ್ಗೆ ಯಾವ ಕ್ರಮವನ್ನೂ ಇದುವರೆವಿಗೂ ಕೈಕೊಳ್ಳದಿರುವುದರಿಂದಾಗಿ ಮಾನ್ಯ ಮಂತ್ರಿಗಳು ಸದನಕ್ಕೆ ಈ ಬಗ್ಗೆ ಹೇಳಿಕೆ ನೀಡಬೇಕೆಂದು ನಾನು ಒತ್ತಾಯ ಪಡಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಅವರಿಂದ ಮಾನ್ಯ ಸದಸ್ಯರಿಗೆ ಸೂಕ್ತ ಉತ್ತರವನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವಂಲ್ಲಿಕಾರ್ಜುನ ಎಸ್. ಖರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಒಂದು ಗಂಟೆಗಿಂತ ಮುಂಚಿತವಾಗಿ ಈ ಪಿಳಿ ರ ಕೆಳಗೆ ನೋಟಿಸ್‌ಗಳನ್ನು ಕೊಡುತ್ತಾರೆ. ನಿಯಮದ ಪ್ರಕಾರ ಸಂಬಧ ಪಟ್ಟ ಮಂತ್ರಿಗಳು ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಅದನ್ನು ಬಿಟ್ಟು ಎಲ್ಲಾ ಪ್ರಶ್ನೆಗಳಿಗೆ ಒಬ್ಬರೆ ಮಂತ್ರಿಗಳು ಉತ್ತರ ಕೊಟ್ಟರೆ ಹೇಗೆ ? ಒಬ್ಬರೋ ಇಬ್ಬರೋ ಮಂತ್ರಿಗಳು ಮೇಲ್ಮನೆಯಲ್ಲಿದ್ದರೂ...

ಅಧ್ಯಕ್ಷರು.—ಪ್ರಶ್ನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೂ ಸಹ ಇರುವಂತಹ ಮಂತ್ರಿಗಳು ಲೀಡ್ ತೆಗೆದುಕೊಂಡು ಸದಸ್ಯರಿಗೆ ಉತ್ತರವನ್ನು ಒದಗಿಸಿಕೊಡುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಈ ವಿಷಯದಲ್ಲಿ ಸಾಕಷ್ಟು ಚರ್ಚೆಯನ್ನು ನಾವು ಮುತ್ತು ನೀವು ಇಬ್ಬರೂ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಮಾಡಿದ್ದೇವೆ. ಸದಸ್ಯರು ನೋಟೀಸ್ ಗಳನ್ನು ನಿಯಮ ೪೪೪ ರ ಕೆಳಗೆ ಒಂದು ಗಂಟೆಗಿಂತ ಮುಂಚಿತವಾಗಿ ಕೊಡಬೇಕೆನ್ನುವ ಪದ್ಧತಿಯನ್ನು ಸಹ ಮಾಡಿದ್ದೀರಿ ನಾನು ಇತ್ತೀಚೆಗೆ ನಿಯಮ ೪೪೪ ರ ಕೆಳಗೆ ನೋಟೀಸ್‌ಗಳನ್ನು ಕೊಡುವುದನ್ನೇ ಬಿಟ್ಟು ಬಿಟ್ಟಿದ್ದೇನೆ. ಕಾರಣವೇನೆಂದರೆ ನಾವು ನೋಟೀಸ್ ಕೊಟ್ಟರು ಸಹ ಅದು ಅರ್ಥ ಶೂನ್ಯ. ನಮ್ಮ ಯುವಕ ಮಂತ್ರಿಕೆಳಾದಂಥ ಶ್ರೀಮಾನ್ ಬಸವರಾಜ ಪಾಟೀಲ್‌ರವರು ಸದನದಲ್ಲಿ ತಕ್ಷಣ ಉತ್ತರವನ್ನು ಕೊಟ್ಟರು. ನಿಜವಾಗಿಯೂ ಕೂಡ ನನಗೆ ಸಂತೋಷವಾಯಿತು. ಎಲ್ಲಾ ವಿಷಯಗಳಿಗೂ ಅಧಿಕಾರಿಗಳನ್ನು ಕೇಳಿಕೊಂಡು ಉತ್ತರ ಕೊಡುವುದಾದರೆ ನೂರಕ್ಕೆ ತೊಂಭತ್ತೊಂಬತ್ತು ಸದಸ್ಯರಿಗೆ ಉತ್ತರ ಸಿಗುವುದಿಲ್ಲ. ಇಲಾಖೆ ಮಂತ್ರಿಗಳಿಗೆ ಸೇರದಿದ್ದರೂ ಅಲ್ಪಸ್ವಲ್ಪ ವಿಚಾರಗಳು ಗೊತ್ತಿರುತ್ತವೆ. ಆ ಬಗ್ಗೆ ಸರ್ಕಾರ ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಈ ರೀತಿಯಾದರೆ ಸದಸ್ಯರ ಉದ್ದೇಶ ಏನಿರುತ್ತದೆ ಅದು ಪ್ರಯೋಜನವಾಗುವುದಿಲ್ಲ. ಕನಿಷ್ಟ ಪಕ್ಷ ೫೦ ಪರ್ಸೆಂಟ್ ನಷ್ಟು ನೋಟೀಸ್ ಗಳಿಗಾದರೂ ಈ ಸದನದಲ್ಲಿ ಸದಸ್ಯರಿಗೆ ಉತ್ತರ ಸಿಗಬೇಕು. ಅದೇ ರೀತಿಯಲ್ಲಿ ಸದಸ್ಯರು ಕೂಡ ಎಲ್ಲಾ ವಿಚಾರಗಳಿನ್ನು ನಿಯಮ ೪೪೪ ರ ಕೆಳಗೆ ತರುವುದಕ್ಕೆ ಆಗುವುದಿಲ್ಲ. ಪತ್ರಿಕೆಗಳಲ್ಲಿ ಬರತಕ್ಕಂಥ ವಿಷಯ ಗಳ ಬಗ್ಗೆಯಾಗಲಿ, ಅಥವಾ ಆಕಸ್ಮಿಕವಾಗಿ ನಡೆಯುವಂತಹ ಕೆಲವು ವಿಶೇಷ ಘಟನೆಗಳ ವಿಷಯಗಳನ್ನಾ

ಗಲೀ ನಿಯಮ ೩೫ಳಿ ರ ಕೆಳಗೆ ತರತಕ್ಕಂಥಾದ್ದು ಸೂಕ್ತ. ಆ ರೀತಿ ತಂದರೂ ಸಹ ಕೆಲವು ಸಾರಿ ಪ್ರಯೋಜನವಾಗಿಲ್ಲ. ಈ ರೀತಿಯಾದರೆ ಅದು ಅರ್ಥಶೂನ್ಯವಾಗುತ್ತದೆ. ಸದಸ್ಯರು ಪ್ರಶ್ನೆಗಳನ್ನು ಎತ್ತುವುದಕ್ಕೂ ಉಲ್ಲಾಸವಿರುವದಿಲ್ಲ. ಮಂತ್ರಿಗಳು ಉತ್ತರ ಕೊಡುವುದಕ್ಕೂ ಕೂಡ ಉಲ್ಲಾಸ ವಿರುವುದಿಲ್ಲ. ಎರಡೂ ಕಡೆಯಿಂದ ಹೊಂದಾಣಿಕೆ ಇರಬೇಕು. ಸರ್ಕಾರದವರು ಸದಸ್ಯರ ಪ್ರಶ್ನೆಗಳಿಗೆ ಸರಿಯಾದ ರೀತಿಯಲ್ಲಿ ಉತ್ತರ ಕೊಟ್ಟರೆ ಈ ಪರಿಸ್ಥಿ ಉದ್ಭವಿಸಂವುದಿಲ್ಲ.

ಅಧ್ಯಕ್ಷರು.—ಈ ಕೆಲಸವನ್ನು ಮಾಡುವುದಕ್ಕೆ ಈಗಾಗಲೇ ತಮಗೆಲ್ಲಾ ಗೊತ್ತಿರುವ ಹಾಗೆ ಅಶ್ಯೂರೆನ್ಸ್ ಕಮಿಟಿ ಇದೆ. ಅವರು ೮ ದಿವಸಗಳಿಗೆ ಒಂದು ಸಾರಿ ಸೇರಿ ಮಂತ್ರಿಗಳು ಕೊಟ್ಟಂತಹ ಭರವಸೆಗಳನ್ನು ಪರಿಶೀಲನೆ ಮಾಡುತ್ತಾರೆ. ಈಗ ಇಲ್ಲಿ ಕೊಟ್ಟಿರತಕ್ಕಂಥ ಭರವಸೆಗಳು ಸಹ ಆ ಸಮಿತಿಯ ಮುಂದೆ ಹೋಗುತ್ತವೆ. ಈ ಶಾಸನ ಸಭೆ ನಡೆಯುವಾಗಲು ಕೂಡ ಸಭೆ ಸೇರಿ ಮಂತ್ರಿಗಳು ಕೊಟ್ಟ ಭರವಸೆಗಳನ್ನು ಪರಿಶೀಲನೆ ಮಾಡುವ ಕೆಲಸ ಅವರಿಗೆ ನಾನು ಹಚ್ಚುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಅದು ಬೇರೆ ವಿಷಯವಾಯಿತು.

ಅಧ್ಯಕ್ಷರು.—ಅದೂ ಕೂಡ ಬಹಳ ಮುಖ್ಯವಾದ ವಿಷಯ.

ಶ್ರೀ ಎಂ. ವೀರಪ್ಪಮೊಯ್ಲಿ.— ಸರ್ಕಾರದವರು ತಕ್ಷಣ ಸದನದಲ್ಲಿ ಉತ್ತರ ಕೊಡುವ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು.—ನಾನು ನನ್ನ ಶಕ್ತಿ ಮೀರಿ ಪ್ರಯತ್ನ ಮಾಡಿ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಸದಸ್ಯರಿಗೆ ಒದಗಿಸಿ ಕೊಡುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ.

೧೪ ಕೇಂದ್ರ ಸರಕಾರದವರು ಗೋದಿ ಮತ್ತು ಅಕ್ಕಿ ಬೆಲೆಯನ್ನು ಏರಿಸಿರುವ ವಿಚಾರ

ಶ್ರೀ ಬಿ. ಎನ್. ಬಚ್ಚೇಗೌಡ (ಹೊಸಕೋಟೆ).—ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದವರು ಗೋಧಿ ಬೆಲೆಯನ್ನು ೧೮ ರೂಪಾಯಿಗಳಷ್ಟು ಜಾಸ್ತಿ ಮಾಡಿದ್ದಾರೆ. ಅಕ್ಕಿ ಬೆಲೆಯನ್ನು ೧೪ ರೂಪಾಯಿ ಗಳಷ್ಟು ಜಾಸ್ತಿ ಮಾಡಿದ್ದಾರೆ. ಆ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಇವರು ರೈತರನ್ನು ಉಪ ಯೋಗಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಮಾನ್ಯ ವಿರೋಧಪಕ್ಷದ ಸದಸ್ಯರು ಯಾವ ರೀತಿಯ ಪ್ರತಿಭಟನೆ, ಯಾವ ರೀತಿಯ ಧರಣಿ ಮಾಡುತ್ತಾರೋ ದಯಮಾಡಿ ತಿಳಿಸಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ನೋಟೀಸ್ ಕೊಡದೆ ಈ ರೀತಿ ಒಂದೇ ಸಾರಿಗೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ತಮ್ಮ ವಿಷಯ ಏನಾದರೂ ಇದ್ದರೆ ನೋಟೀಸ್ ಕೊಟ್ಟು ಪ್ರಸ್ತಾಪ ಮಾಡಿದರೆ ನನ್ನದೇನು ಅಡ್ಡಿ ಇಲ್ಲ. ತಾವು ಇನ್ನು ಹೊಸಬರು ನಿಯಮ ಪಾಲಿಸಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಎತ್ತಿದ್ದಂಥ ಪ್ರಶ್ನೆಗೆ ನಾನು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದೇನೆ...

ಅಧ್ಯಕ್ಷರು.—ನಾನು ಆಗಲೇ ಅವರಿಗೆ ಹೇಳಿದ್ದೇನೆ. ನೀವಿನ್ನೂ ಹೊಸಬರು ಎಂದು. ಹೊಸ ಸದಸ್ಯರು ನಿಯಮಗಳನ್ನು ಸ್ವಲ್ಪ ತಿಳಿದುಕೊಳ್ಳಬೇಕು...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಅವರು ಪ್ರಸ್ತಾಪ ಮಾಡಿದಂಥ ವಿಷಯ ರೇಕಾರ್ಡ್‌ಗೆ ಹೋಗಿದೆ. ಅದನ್ನು ತಾವು ಸ್ವಲ್ಪ ಗಮನಿಸಬೇಕು. ಇಲ್ಲ ಅದನ್ನು ರೆಕಾರ್ಡ್‌ನಿಂದ ತೆಗೆಸಿ...

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು)— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಅದೇನು ಉತ್ತರ ಕೊಡುತ್ತಾರೋ ಕೊಡಲಿ. ಆದರೆ ರೇಕಾರ್ಡಾನಿಂದ ತೆಗೆದು ಹಾಕುವುದು ಮಾತ್ರ ಬೇಡ.

ಶ್ರೀ ಎಸ್. ಬಂಗಾರಪ್ಪ— ನಿಯಮ ೩೫ಳಿರ ಕೆಳಗೆ ಈ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರೆ...